

ಜೂನ್ 7ರಂದು ನಿಧನರಾದ ಚಿರಂಜೀವಿ ಸರ್ಜಾ ನಾಯಕನಾಗಿ ನಟಿಸಿದ 'ಖಾಕಿ' ಚಿತ್ರ ಈ ವರ್ಷದ ಜನವರಿಯಲ್ಲಿ ತೆರೆಕಂಡಿತ್ತು. ಇದರಲ್ಲಿ ತಾನ್ಯಾ ಹೋಪ್ ನಾಯಕಿಯಾಗಿ ನಟಿಸಿದ್ದರು

ಸಂಭ್ರಮವಿಲ್ಲದೆ, ಗಲ್ಲಾಪೆಟ್ಟಿಗೆಯಲ್ಲಿ ಸರತಿ ನಿಂತ ಕಿಕ್ಕಿರಿದ ಪ್ರೇಕ್ಷಕಗಣವಿಲ್ಲದೆ ಅಂತರ್ಜಾಲವೆಂಬ ಕಲ್ಪಿತ ಬೀದಿಯಲ್ಲಿ ಸದ್ದು ಸಡಗರಗಳಿಲ್ಲದೆ ಚಿತ್ರ ಬಿಡುಗಡೆಯಾದ ನಿಸ್ತೇಜ ಶುಕ್ರವಾರಗಳವು. ಚಿತ್ರವನ್ನು ಎಷ್ಟು ಜನರು ನೋಡಿದರೋ, ಎಷ್ಟು ಜನರು ಮೆಚ್ಚಿಕೊಂಡರೋ ಗೊತ್ತಿಲ್ಲ. ಆದರೆ ಹೌಸ್‌ಫುಲ್ ಬೋರ್ಡುಗಳ ಹಂಗಿಲ್ಲದೆ ನಿರ್ಮಾಪಕರಿಗೆ ಅಸಲಿಗೆ ಜೊತೆಗೆ ಒಂದಿಷ್ಟು ಲಾಭದ ಬಾಬತ್ತನ್ನೂ ಕೊಟ್ಟಿದ್ದಂತೂ ನಿಜ.

ಈ ಸಿನಿಮಾಗಳು ಬಿಡುಗಡೆಯಾದ ಎರಡು ತಿಂಗಳು ಮತ್ತಾವ ಕನ್ನಡ ಸಿನಿಮಾವೂ ಒಟಿಟಿಯಲ್ಲಿ ನೇರ ಬಿಡುಗಡೆಯಾಗಲಿಲ್ಲ. ಸೆಪ್ಟೆಂಬರ್ ಹೊತ್ತಿಗೆ ಚಿತ್ರಮಂದಿರಗಳನ್ನು ತೆರೆಯಬೇಕು ಎಂಬ ಮಾತುಗಳು ಜೋರಾಗಿಯೇ ಕೇಳಿಬರಲು ಶುರುವಾಗಿದ್ದವು. ಬೇರೆಲ್ಲ ಕ್ಷೇತ್ರಗಳಲ್ಲಿನ ನಿರ್ಬಂಧ ಹಂತಹಂತವಾಗಿ ತೆರವಾಗುತ್ತಿರುವುದೂ ಅದಕ್ಕೆ ಒಂದು ಕಾರಣವಾಗಿತ್ತು. ಅಕ್ಟೋಬರ್ 15ರ ಹೊತ್ತಿಗೆ ಚಿತ್ರಪ್ರದರ್ಶನಕ್ಕೆ ಅನುಮತಿಯೂ ಸಿಕ್ಕಿಬಿಟ್ಟಿತು. ಸಾಕಷ್ಟು ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು, ಹಾಗೆಯೇ ಒಂದು ಆಸನ ಬಿಟ್ಟು ಇನ್ನೊಂದು ಆಸನದಲ್ಲಿ ಕೂಡುವ ವ್ಯವಸ್ಥೆಯಾಗಬೇಕು ಎಂಬ ನಿಬಂಧನೆಯೂ ಇತ್ತು. ಆದರೆ ಈ ಕಾಲಘಟ್ಟದಲ್ಲಿ ಚಿತ್ರವನ್ನು ಬಿಡುಗಡೆ ಮಾಡುವ ಧೈರ್ಯ ಯಾರಿಗಿದೆ? ಬದಲಿಗೆ ಹಳೆ ಸಿನಿಮಾಗಳೇ ಮತ್ತೆ ಚಿತ್ರಮಂದಿರಗಳಲ್ಲಿ ಮರುಬಿಡುಗಡೆಯಾದವು. ಅನ್‌ಲಾಕ್ ಆದ ಆರಂಭದ ದಿನವೇ 236 ಶೋಗಳು ನಡೆದರೂ

## ಅಗಲಿದವರು

2020 ಕೊರೊನಾ ನೋವಷ್ಟೇ ಅಲ್ಲ, ಹಲವರ ಅಗಲಿಕೆಯ ನೋವನ್ನೂ ಚಿತ್ರರಂಗ ಭರಿಸಬೇಕಾಗಿ ಬಂತು.

ಲಾಕ್‌ಡೌನ್ ಘೋಷಣೆಯಾದ ಕೆಲವೇ ದಿನಗಳಲ್ಲಿ ಅಂದರೆ ಏಪ್ರಿಲ್ 6ರಂದು ಹಾಸ್ಯನಟ ಬುಲೆಟ್ ಪ್ರಕಾಶ್ ತೀರಿಕೊಂಡರು. ಕುಡಿತ ಮತ್ತು ದೇಹಕರಗಿಸುವ ಅಪಾಯಕಾರಿ ಚಿಕಿತ್ಸೆಯೇ ಅವರಿಗೆ ಮುಳುವಾಯಿತು. ನೂರಾರು ಸಿನಿಮಾಗಳಲ್ಲಿ ಸಣ್ಣಪುಟ್ಟ ಪಾತ್ರಗಳನ್ನು ಮಾಡುತ್ತ ಗುರ್ತಿಸಿಕೊಂಡಿದ್ದ ಮೈಕೇಲ್ ಮಧು ಕೂಡ ಲಾಕ್‌ಡೌನ್ (ಮೇ 13) ಸಮಯದಲ್ಲಿಯೇ ತೀರಿಕೊಂಡರು.

ಜೂನ್ 7ರಂದು ಚಿರಂಜೀವಿ ಸರ್ಜಾ ಸಾವಿನ ಸುದ್ದಿ ಕೇಳಿ ಚಂದನವನವಷ್ಟೇ ಅಲ್ಲ, ಇಡೀ ಕರ್ನಾಟಕವೇ ತಳಮಳಿಸಿತು. ಹೃದಯಾಘಾತದಿಂದ ತೀರಿಕೊಂಡ ಚಿರು, ಮುದ್ದಿನ ಮಡದಿ ಮೇಘನಾರಾಜ್ ಮಡಿಲಲ್ಲಿ ತಮ್ಮ ಕುಡಿಯನ್ನು ಬಿಟ್ಟು ಹೋದರು.

ರಾಕ್‌ಲೈನ್ ಸಂಸ್ಥೆಯಲ್ಲಿ ಹಲವು ದಶಕಗಳ ಕಾಲ ಕೆಲಸ ಮಾಡಿದ್ದ, 'ಪಂಚರಂಗಿ' ಸಿನಿಮಾದ ನಂತರ ಬಹುಬೇಡಿಕೆಯ ಪೋಷಕನಟನಾಗಿಯೂ ಗುರ್ತಿಸಿಕೊಂಡಿದ್ದ ರಾಕ್‌ಲೈನ್ ಸುಧಾಕರ್ ಸೆ. 24ರಲ್ಲಿ ಶೂಟಿಂಗ್ ಸೆಟ್‌ನಲ್ಲಿಯೇ ಹೃದಯಾಘಾತದಿಂದ ನಿಧನರಾದರು. ಈ ಸುದ್ದಿಯನ್ನು ಅರಗಿಸಿಕೊಳ್ಳುವ ಮುಂಚೆಯೇ ಮತ್ತೊಂದು ಆಘಾತ ಎದುರಾಯಿತು. ಕೊನೆಯ ದಿನಗಳಲ್ಲಿಯೂ ಜೀವನೋತ್ಸಾಹದಿಂದ ತುಳುಕುತ್ತಿದ್ದ, ದೇವರು ಪ್ರತಿಭೆಯನ್ನು ವಿನಯದ ಪಾತ್ರೆಯಲ್ಲಿ ತುಂಬಿ ಕಳಿಸಿದಂತಿದ್ದ ಎಸ್.ಪಿ. ಬಾಲಸುಬ್ರಹ್ಮಣ್ಯಂ ಸೆ. 25ರಂದು ನಿಧನರಾದರು. ಜನ್ಮ ಬೇರೆ ರಾಜ್ಯದಲ್ಲಿಯೇ ಆದರೂ, ಕನ್ನಡಿಗರ ಪ್ರೀತಿಯನ್ನು ಸದಾ ಸ್ಮರಿಸಿಕೊಳ್ಳುತ್ತಿದ್ದ ಎಸ್‌ಪಿಬಿ ನಿಧನಕ್ಕೆ ಕನ್ನಡ ಮನಸ್ಸುಗಳು ತಮ್ಮ ಮನೆ ಹಿರಿಯನನ್ನೇ ಕಳೆದುಕೊಂಡಂತೆ ಶೋಕಿಸಿದವು.

'ಗಂಧದ ಗುಡಿ', 'ಮಯೂರ' ಸೇರಿದಂತೆ ಹಲವು ಸೂಪರ್‌ಹಿಟ್ ಸಿನಿಮಾಗಳನ್ನು ಕೊಟ್ಟ ಹಿರಿಯ ನಿರ್ದೇಶಕ ವಿಜಯಾರೆಡ್ಡಿ ಅ. 9ರಂದು ನಿಧನರಾದರು. ಇದಾಗಿ ಎರಡೇ ದಿನಕ್ಕೆ ಅಂದರೆ ಅ. 11ರಂದು ಹಿರಿಯ ಸಂಗೀತ ನಿರ್ದೇಶಕ ರಾಜನ್ ಸಾವಿನ ಸುದ್ದಿಯೂ ವಿಷಾದಗೀತೆಯ ಆರ್ತಸ್ವರದಂತೆ ಸಿನಿಸಹೃದಯವನ್ನು ಕಲುಕಿತು.

ಚಿತ್ರರಂಗದ ಸಹಾಯಕ ನಿರ್ದೇಶಕರು, ಕಿರುತೆರೆ ನಟರು, ತಂತ್ರಜ್ಞರ ಸಾವು, ಆತ್ಮಹತ್ಯೆಯ ಸುದ್ದಿಗಳಂತೂ ವರ್ಷದುದ್ದಕ್ಕೂ ಆಗಾಗ ಕೇಳಿಬರುತ್ತಲೇ ಇತ್ತು. ಹಾಗಾಗಿ ಕೊರೊನಾ ಭಯದ ಜೊತೆಗೆ ಸಾವಿನಸೂತಕವನ್ನೂ ಚಂದನವನ ವರ್ಷವಿಡೀ ಹೊದ್ದು ಮಲಗಬೇಕಾಯ್ತು.


ವಿಜಯಾರೆಡ್ಡಿ


ಬುಲೆಟ್ ಪ್ರಕಾಶ್


ಎಸ್.ಪಿ. ಬಾಲಸುಬ್ರಹ್ಮಣ್ಯಂ